ಹುದ್ದೆಗಳನ್ನು ಶಿಕ್ಷಕರಿಂದ ತುಂಬುವಾಗ ನಾಗಮಂಗಲ ತಾಲ್ಲೂಕಿನಲ್ಲಿ ಖಾಲಿ ಇರುವ ಪ್ರೌಢಶಾಲಾ ಶಿಕ್ಷಕರ ಖಾಲಿ ಸ್ಥಾನಗಳನ್ನು ಆದ್ಯತೆಯ ಮೇಲೆ ತುಂಬಲಾಗುವುದು.

ಸರ್ಕಾರಿ ಪದವಿ ಪೂರ್ವ ಕಾಲೇಜು ನಾಗಮಂಗಲದಲ್ಲಿ ರಸಾಯನಶಾಸ್ತ್ರ ಉಪನ್ಯಾಸಕರ ಹುದ್ದೆ ಖಾಲಿ ಇದೆ. ಆದರೆ ಕನ್ನಡ ಹುದ್ದೆಯು ಖಾಲಿ ಇಲ್ಲ. ರಸಾಯನ ಶಾಸ್ತ್ರ ಉಪನ್ಯಾಸಕರ ಹುದ್ದೆಯನ್ನು ತುಂಬಲು ಅರ್ಹ ಸಹಶಿಕ್ಷಕರು ಲಭ್ಯವಿಲ್ಲದ ಪ್ರಯುಕ್ತ ನೇರ ನೇಮಕಾತಿಯಿಂದ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜು, ಬೆಳ್ಳೂರಿನಲ್ಲಿ ಆಂಗ್ಲ ಉಪನ್ಯಾಸಕರ ಹುದ್ದೆ ಇದ್ದುದು ನಿಜ. ಆದರೆ ದಿನಾಂಕ 2-9-1991ರಂದು ಖಾಲಿ ಹುದ್ದೆಯನ್ನು ತುಂಬಲಾಗಿದೆ.

(9) ಬೀದರ್ ಜಿಲ್ಲೆಯಲ್ಲಿ 1983ರಲ್ಲಿ ಡಿಸ್ಟಲರಿಗಳ ಪರವಾನಿಗೆಯನ್ನು ನೀಡುವಲ್ಲಿ ನಡೆದಿರುವ ತಾರತಮ್ಯ.

SHRI G.R. RAMAKRISHNA (Kamalapur): Bidar district being an industrially backward area some local persons including ans.c., Persons, an Ex-serviceman and three highly qualified, have floated a company under the name of 'Karnataka Refineries' and Chemicals Private Ltd. and applied to Government for grant of Distilleries Licence on 23-3-1983. Though all the formalities are completed, the Government have granted to juniors and outside persons who have not even completed the required formalities neglecting the local people. Hence I urge the Government to enquire into this and take action to grant the licence to Karnataka Refineries & Chemicals Private Ltd., immediately.

SHRI DHARM SINGH (Minister for Home & Excise): Sir, I wish to make the following statement.

M/s. Karnataka Refineries and Chemicals (P) Ltd., Bidar, applied for sanctionof DistilleryLicenceon26.3.1983.TheDeputyCommissioner(Excise),Bidar, recommended this case only for issue of assurance letter, for supply of 18,000 MTS of Molasses per annum for manufacture of Industrial Alcohol. Accordingly, on 12.10.1984, an assurance letter for supply of 18,000 MTs of Molasses in favour of the applicant, subject to the availability, was issued.

This company's application was considered by Government and was rejected on 8.12.1989 (vide Government letter No. HD 123 EFL 88) due to non-availability of Molasses and ban on sanction of distillery licence.

However, since there was ban on sanction of new Distillery Licence as per Government letter No.HD 123 EFL 89 dated 11.8.89, the Excise Commissioner informed the applicant on 23.8.1989 that the Department would, however, make available 4,52,340 litres of rectified spirit p.m. for manufacture of Chemical under RS-II licence.

Though the applicant was given an assurance letter to make available R.S. for manufacture of Ethyl Acetate and Di-Ethyl Oxolate, he did not come forward to take the licence, during 1990-91 and 1991-92. The Government while considering application for sanction of new distillery licences for Molasses based distilleries, all the valid applications pending then were considered.

Since M/s Karnataka Refineries and Chemicals(P) Ltd., Bidar did not make any application as required under rule 3 of K.E. (Distillery and Warehouse), Rules 1967, therefore the question of considering their application for sanction of distillery licence did not arise. On the day of sanctioning of new distilleries, no valid application of M/s Karnatakas Refineries and Chemicals (P) Ltd., Bidar was pending. The claim of M/s Karnataka Refineries and Chimicals (P) Ltd., Bidar that licences have been granted to juniors and outside persons who have not been comepleted the required formalities, neglecting the local people, is in the light of the above facts is not correct.

ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ

ನಗರಾಭಿವೃದ್ಧಿ ಇಲಾಖೆ (ಮುಂದುವರಿದ ಚರ್ಚೆ)

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಉಪಾಧ್ಯಕ್ಷರೇ.....

ಶ್ರೀ ಆರ್. ವಿ. ದೇಶಪಾಂಡೆ : ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಸಂಬಂಧಪಟ್ಟ ಮಂತ್ರಿಗಳು ಯಾವುದೋ ಒಂದು ನಿಯೋಗವನ್ನು ಭೇಟಿ ಮಾಡಿ ಈಗ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಂತ್ರಿಗಳು ಇಲ್ಲವೆಂದು ನಾನು ಕೇಳುತ್ತಿಲ್ಲ. ಮಾನ್ಯ ದೇಶಪಾಂಡೆಯವರು ಕೇಳಿದರು.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಇಲ್ಲಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನೀವು ಯಾರೂ ಇಲ್ಲಿ ಕುಳಿತುಕೊಳ್ಳುವುದು ಬೇಡ. ಒಂದು ಪುಸ್ತಕ ಇಟ್ಟು ಹೋಗಿ ನಾವು ಅದಕ್ಕೆ ಹೇಳುತ್ತೇವೆ. ನಿಮ್ಮ ಕುರ್ಚಿಗೆ ಹೇಳುತ್ತೇವೆ. ನಮಗೇನು? ನಾನು ಯಾರನ್ನೂ ಕೇಳುವುದಿಲ್ಲ. ನಾನು ಕೇಳಿದನೇ, ಮಾನ್ಯ ದೇಶಪಾಂಡೆಯವರು ಕೇಳಿದರು. ನೀವು ಒಬ್ಬರು ಇದ್ದರೆ ಸಾಕು. ನೀವು ಎಲ್ಲಾ ಇಲಾಖೆಗಳನ್ನು ಒಳಗೊಂಡಂತೆ ಮಾತನಾಡುತ್ತೀರಿ. ತಾವು ಒಬ್ಬರು ಇದ್ದರೆ ಸಾಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಹೇಗಾಗುತ್ತದೆ?

ಶ್ರೀ ವಾಟಾಳ್ ನಾಗರಾಜ್ : ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಯಾವುದೇ ಇಲಾಖೆ ಇರಲಿ ತಾವು ಎದ್ದು ನಿಲ್ಲುತ್ತೀರಿ ಉತ್ತರ ಕೊಡುತ್ತೀರಿ. ಎಲ್ಲರಿಗೂ ರಕ್ಷಣೆ ಕೊಡುತ್ತೀರಿ. ಸಮರ್ಪಕವಾದ ಉತ್ತರವನ್ನು ಸಹ ಕೊಡುತ್ತೀರಿ. ನೀವು ಎಲ್ಲಾ ಇಲಾಖೆಗಳ ಸಚಿವರು ಅಂದರೆ ಅನ್ನಬಹುದು. ನಗರಾಭಿವೃದ್ಧಿ